**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಾಮರಾಜನಗರ**

**ಸಿ.ಸಿ. ನಂ. 262/2026**

ಫಿರ್ಯಾದಿ : ರಾಜ್ಯದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ
ಚಾಮರಾಜನಗರ.

**ವಿರುದ್ಧ**

ಆರೋಪಿ : ರಘು ಬಿನ್ ಲೇಟ್ ಸೂರಯ್ಯ,
ವಯಸ್ಸುಃ 55 ವರ್ಷ, ಕೂಲಿ ಕೆಲಸ,
ವಾಸಃ ಹೆಗ್ಗವಾಡಿ ಗ್ರಾಮ,
ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

# ಆರೋಪಣೆ

**ಶ್ರೀ ಪ್ರಕಾಶ್ ಸಿ.ಡಿ., ಬಿ.ಎ., ಎಲ್.ಎಲ್.ಬಿ, ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ, ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,**

ದಿನಾಂಕಃ 03.02.2026 ರಂದು ಸಾಯಂಕಾಲ 04.00ರ ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಮರಾಜನಗರ ತಾಲ್ಲೂಕು ವೀರನಪುರ ಗ್ರಾಮದ ಹೊರವಲಯದಲ್ಲಿರುವ ವೀರನಪುರ ಗ್ರಾಮದಿಂದ ಉಡಿಗಾಲ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಮಹದೇವಪ್ಪ ರವರ ಜಮೀನಿನ ಬಳಿ ಹುಣಸೇಮರದ ಕೆಳಗೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಯಾವುದೇ ರಹದಾರಿ ಇಲ್ಲದೇ ಅಕ್ರಮವಾಗಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕೀಯ ಮದ್ಯ ತುಂಬಿರುವ 20 ಟೆಟ್ರಾ ಪ್ಯಾಕ್ ಗಳನ್ನು ಹಾಗೂ 03 ಖಾಲಿ ಪ್ಲಾಸ್ಟಿಕ್ ಲೋಟಗಳನ್ನು ಕೈಯಲ್ಲಿ ಹಿಡಿದುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮತ್ತು ಕುಡಿಯಲು ಪ್ರಚೋದನೆ ಮಾಡಿದ್ದು ಮತ್ತು ಸಾರ್ವಜನಿಕ ಸ್ಥಳದಲ್ಲಿ ಮದ್ಯ ಕುಡಿಯಲು ಅನುವು ಮಾಡಿದ್ದು, ಆ ಮೂಲಕ ಕಲಂ. 15(ಎ),32(3) ಕರ್ನಾಟಕ ಅಬಕಾರಿ ಕಾಯಿದೆ

ಅಡಿಯಲ್ಲಿ ಅಪರಾಧವಾನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

ಪ್ರಶ್ನೆಃ 1. ಓದಿ ಹೇಳಿದುದು ಅರ್ಥವಾಯಿತೇ?

ಉತ್ತರಃ ಹೌದು

ಪ್ರಶ್ನೆಃ 2. ಶಿಕ್ಷೆಗೆ ಒಪ್ಪುತ್ತೀರೋ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ ತಪ್ಪಾಯಿತು.

(ಮೇಲಿನ ದೋಷರೋಪಣೆಯನ್ನು ಆರೋಪಿಗೆ ಓದಿ ವಿವರಿಸಲಾಗಿ, ಆರೋಪಿ ಅರ್ಥಮಾಡಿಕೊಂಡು ನೀಡಲಾದ ಉತ್ತರವನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 10.07.2026.

(ಪ್ರಕಾಶ್ ಸಿ.ಡಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ.,
ಚಾಮರಾಜನಗರ.

ಆರೋಪಿಯ ಸಹಿ